ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\1068\2016\ಸನಿಕಾಸ–1 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 09/11/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ**

**ವಿಷಯ:** ಸರ್ಕಾರಿ ನೌಕರರಾದ ಮೈಸೂರು ಜಿಲ್ಲೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂ ಸ್ವಾಧೀನಾಧಿಕಾರಿಯಾದ ಶ್ರೀ.ಎನ್.ಎಸ್.ಚಿದಾನಂದ ರವರು ಕರ್ತವ್ಯ ಲೋಪ/ ದುರ್ವರ್ತನೆ ಎಸಗಿರುವ ಬಗ್ಗೆ.

*********

ಮೈಸೂರು ಜಿಲ್ಲೆ ಚಾಮರಾಜ ಮೊಹಲ್ಲಾ ದಿವಾನ್ ರಸ್ತೆ ಸಿಹೆಚ್ 99 ನಂ.558/1ರ ನಿವಾಸಿಯಾದ ಶ್ರೀ.ಆರ್.ಗುರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂ ಸ್ವಾಧೀನಾಧಿಕಾರಿಯಾದ ಶ್ರೀ.ಎನ್.ಎಸ್.ಚಿದಾನಂದ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:–** ಎದುರುದಾರರು ಕಛೇರಿಯ ಕರ್ತವ್ಯಕ್ಕೆ ಸರಿಯಾಗಿ ಹಾಜರಾಗದೇ ಹಾಗೂ ಸರ್ಕಾರದ ಸುತ್ತೋಲೆಯಂತೆ ಸರ್ಕಾರಿ ನೌಕರರು ಹೊರಗೆ ಹೋಗುವಾಗ ಮೇಲಾಧಿಕಾರಿಗಳ ಅನುಮತಿಯನ್ನು ಪಡೆದು, ಚಲನವಲನ ವಹಿಯಲ್ಲಿ ನಮೂದಿಸಿ ಹೋಗಬೇಕಾಗಿದ್ದು, ಆದರೆ ಎದುರುದಾರರು ಸರ್ಕಾರದ ಆದೇಶವನ್ನು ಪಾಲಿಸಿಲ್ಲ. ಎದುರುದಾರರು ತಮ್ಮ ಸಿಬ್ಬಂಧಿಗಳ ಹಾಜರಾತಿಯನ್ನು ಪರಿಶೀಲಿಸುವುದು ಪ್ರಮುಖ ಕರ್ತವ್ಯವಾಗಿದೆ, ಆದರೆ ಎದುರುದಾರರ ಕಛೇರಿಯಲ್ಲಿ ಯಾವುದೇ ಹಾಜರಾತಿ ಮತ್ತು ಚಲನ ವಲನ ವಹಿಯನ್ನು ನಿರ್ವಹಿಸಿಲ್ಲ ಮತ್ತು ಎದುರುದಾರರು ಜನವರಿ, 2015ರ ದಿನಾಂಕ:1, 6, 9, 16 ಮತ್ತು 27, ಏಪ್ರಿಲ್, 2015ರ 4, 15, 21 (ರಜೆ ದಿನ), 25 ಮತ್ತು 27 ಮತ್ತು ಮೇ, 2015ರ 2, 4, 7, 12, 16, 19, 20, 23, 24 ಮತ್ತು 25 ದಿನಗಳನ್ನು ಹೊರತುಪಡಿಸಿ ಉಳಿದ ಯಾವುದೇ ದಿನಗಳಂದು ಹಾಜರಾತಿ ವಹಿಯಲ್ಲಿ ಸಹಿ ಹಾಕಿಲ್ಲ. ಶ್ರೀ.ಎಂ.ಎಸ್.ಮಂಜುನಾಥ್

ಎಂಬುವವರು ಡಿಸೆಂಬರ್, 2015ರ 30 ಮತ್ತು 31ರಂದು ಕಛೇರಿಗೆ ಹಾಜರಾಗದಿರುವ ಬಗ್ಗೆ 'A' ಎಂದು ಗುರುತು ಹಾಕಿ ಕಿರು ಸಹಿ ಮಾಡಿದೆ, ಆದರೆ ಅದೇ ತಿಂಗಳು ಇತರೆ ನೌಕರರು ಕಛೇರಿಗೆ ಹಾಜರಾಗದಿರುವ ಬಗ್ಗೆ ಹಾಜರಾತಿ ವಹಿಯಲ್ಲಿ ಎದುರುದಾರರು ಏನು ನಮೂದಿಸದೇ ಹಾಗೆಯೇ ಬಿಟ್ಟಿದ್ದಾರೆ ಹಾಗೂ ಆಕಸ್ಮಿಕ ರಜೆಯ ವಿವರಗಳನ್ನು ಅಂತಿಮ ಅಂಕಣದಲ್ಲಿ ನಮೂದಿಸಿಲ್ಲ, ಕಾರಣ ಎದುರುದಾರರು ಗೈರುಹಾಜರಾದ ದಿನಗಳನ್ನು ಅನಧಿಕೃತ ಹಾಜರಿ ಎಂದು ಪರಿಗಣಿಸಿ ಕೆಸಿಎಸ್ಆರ್ ನಿಯಮ, 106ಎ ಪ್ರಕಾರ ಕ್ರಮ ಕೈಗೊಳ್ಳಲು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರಿನ ಅಂಶಗಳನ್ನು ಅಲ್ಲಗಳೆದಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಗಳನ್ನು ಅಲ್ಲಗಳೆದಿದ್ದಾರೆ.

5. ದೂರಿನ ಬಗ್ಗೆ ತನಿಖೆ ಕೈಗೊಂಡು ವರದಿ ನೀಡುವಂತೆ ಆರಕ್ಷಕ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು ವಿಭಾಗ ರವರಿಗೆ ಆದೇಶಿಸಿದ್ದು, ಸದರಿಯವರು ತನಿಖೆ ಕೈಗೊಂಡು ವರದಿ ಸಲ್ಲಿಸಲು ಆರಕ್ಷಕ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮೈಸೂರು (ಇನ್ನು ಮುಂದೆ, 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ರವರಿಗೆ ಆದೇಶಿಸಿದ್ದು, ಸದರಿಯವರು ತಮ್ಮ ವರದಿಯಲ್ಲಿ –

1) ಎದುರುದಾರರು ದಿನಾಂಕ:29/09/2014 ರಿಂದ 25/07/2016 ರವರೆಗೆ ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಕೆಸಿಎಸ್ಆರ್ ನಿಯಮದಂತೆ, ತಮ್ಮ ಕಛೇರಿಯಲ್ಲಿ ಯಾವುದೇ ಚಲನ–ವಲನ ವಹಿ ಅಥವಾ ದಿನಚರಿಯನ್ನು ನಿರ್ವಹಿಸಿಲ್ಲ ಮತ್ತು ದಿನಪ್ರತಿ ಸಿಬ್ಬಂಧಿಗಳ ಹಾಜರಾತಿ ಪುಸ್ತಕವನ್ನು ಪರಿಶೀಲಿಸಬೇಕಿದ್ದು, ಆದರೆ, ಎದುರುದಾರರು ಪ್ರತಿದಿನ ಹಾಜರಾತಿ ಪುಸ್ತಕ ಪರಿಶೀಲಿಸಿಲ್ಲ;

2) ಜನವರಿ, 2015ರ ದಿನಾಂಕ:1, 6, 9, 16 ಮತ್ತು 27, ಏಪ್ರಿಲ್, 2015ರ 4, 15, 21 (ರಜೆ ದಿನ), 25 ಮತ್ತು 27 ಮತ್ತು ಮೇ, 2015ರ 2, 4, 7, 12, 16, 19, 20, 23, 24 ಮತ್ತು 25 ದಿನಗಳಲ್ಲಿ ಸಿಬ್ಬಂಧಿಗಳ ಹಾಜರಾತಿಯನ್ನು ಪರಿಶೀಲಿಸಿ ಚಿಕ್ಕ ರುಜು ಮಾಡಿದ್ದು, ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಸರ್ಕಾರಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ವಾಹನದ ಲಾಗ್ ಪುಸ್ತಕದಲ್ಲಿ ನಮೂದಿದೆ;

Sd/-

mys/1068/16

3) ಹಾಜರಾತಿ ವಹಿಯಲ್ಲಿ ಶ್ರೀ.ಎಂ.ಎಸ್.ಮಂಜುನಾಥ್ ಎಂಬುವವರು ಡಿಸೆಂಬರ್, 2015ರ 30 ಮತ್ತು 31ರಂದು ಕರ್ತವ್ಯಕ್ಕೆ ಗೈರು ಹಾಜರಾಗಿದ್ದು, ಆಡಳಿತ ವಿಭಾಗದವರಿಂದ ಮಾಹಿತಿ ಪಡೆದ ನಂತರ 'A' ಎಂದು ನಮೂದಿಸಿರುವುದಾಗಿದೆ;

4) ಎದುರುದಾರರು ತಮ್ಮ ಕರ್ತವ್ಯದ ಅವಧಿಯಲ್ಲಿ ಕೆಸಿಎಸ್ಆರ್ ನಿಯಮದಂತೆ ತಮ್ಮ ಕಛೇರಿಯಲ್ಲಿ ಚಲನ–ವಲನ ವಹಿ ಅಥವಾ ವೈಯಕ್ತಿಕ ದಿನಚರಿಯನ್ನು ನಿರ್ವಹಿಸದೇ ಹಾಗೂ ಸಿಬ್ಬಂಧಿಗಳ ಹಾಜರಾತಿ ವಹಿಯಲ್ಲಿ ಕೆಲವೊಂದು ದಿನಗಳಲ್ಲಿ ಮಾತ್ರ ಹಾಜರಾತಿ ಪರಿಶೀಲಿಸಿ, ಸಹಿ ಮಾಡಿದೆ ಎಂದು ಹೇಳಿದ್ದಾರೆ.

6. ತನಿಖಾಧಿಕಾರಿಗಳ ವರದಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ವರದಿಯ ಅಂಶಗಳನ್ನು ಅಲ್ಲಗಳೆದಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ಎದುರುದಾರರು ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಕೆಸಿಎಸ್ಆರ್ ನಿಯಮದಂತೆ ಸರ್ಕಾರಿ ನೌಕರರು ಕರ್ತವ್ಯಕ್ಕೆ ಹಾಜರಾದ ನಂತರ ಹೊರ ಹೋಗಬೇಕಾದಲ್ಲಿ ಚಲನ–ವಲನ ವಹಿಯಲ್ಲಿ ವಿವರಗಳನ್ನು ನಮೂದಿಸ ಬೇಕಿದೆ. ಆದರೆ, ಎದುರುದಾರರು ತಮ್ಮ ಕಛೇರಿಯಲ್ಲಿ ಚಲನ–ವಲನ ವಹಿ ಅಥವಾ ದಿನಚರಿ ಅನ್ನು ನಿರ್ವಹಿಸಿಲ್ಲ;

2) ಎದುರುದಾರರು ಕಛೇರಿಯ ಮೇಲಾಧಿಕಾರಿಯಾಗಿದ್ದು ಎಲ್ಲಾ ಸಿಬ್ಬಂಧಿಗಳ ಹಾಜರಾತಿಯನ್ನು ಪರಿಶೀಲಿಸುವುದು ಎದುರುದಾರರ ಕರ್ತವ್ಯವಾಗಿದ್ದು, ಕೆಲವೊಂದು ದಿನಗಳಲ್ಲಿ ಮಾತ್ರ ಹಾಜರಾತಿಯನ್ನು ಪರಿಶೀಲಿಸಿ, ಸರ್ಕಾರದ ನಿಯಮಾವಳಿಗಳ ಅನ್ವಯ ಎಲ್ಲಾ ದಿನಗಳಂದು ಹಾಜರಾತಿಯನ್ನು ಪರಿಶೀಲಿಸಿಲ್ಲ;

3) ಜನವರಿ, 2015ರ ದಿನಾಂಕ:1, 6, 9, 16 ಮತ್ತು 27, ಏಪ್ರಿಲ್, 2015ರ 4, 15, 21 (ರಜೆ ದಿನ), 25 ಮತ್ತು 27 ಮತ್ತು ಮೇ, 2015ರ 2, 4, 7, 12, 16, 19, 20, 23, 24 ಮತ್ತು 25 ದಿನಗಳಲ್ಲಿ ಸಿಬ್ಬಂಧಿಗಳ ಹಾಜರಾತಿಯನ್ನು ಪರಿಶೀಲಿಸಿ ಚಿಕ್ಕ ರುಜು ಮಾಡಿ, ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಸರ್ಕಾರಿ ಕರ್ತವ್ಯ ನಿರ್ವಹಿಸಿರುವ ಬಗ್ಗೆ ವಾಹನದ ಲಾಗ್ ಪುಸ್ತಕದಲ್ಲಿ ನಮೂದಾಗಿದೆ;

4) ಸಿಬ್ಬಂಧಿಗಳ ಹಾಜರಾತಿ ವಹಿಯಲ್ಲಿ ಶ್ರೀ.ಎಂ.ಎಸ್.ಮಂಜುನಾಥ್ ಎಂಬುವವರು ಡಿಸೆಂಬರ್, 2015ರ 30 ಮತ್ತು 31ರಂದು ಕರ್ತವ್ಯಕ್ಕೆ ಗೈರು ಹಾಜರಾಗಿದ್ದು, ಆಡಳಿತ ವಿಭಾಗದವರಿಂದ ಮಾಹಿತಿ ಪಡೆದ ನಂತರ 'A' ಎಂದು ನಮೂದಿದೆ;

8. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಎದುರುದಾರರು ನೀಡಿರುವ ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

9. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಅದಲ್ಲದೆ, ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

11. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

9-11-17.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ–2,
ಕರ್ನಾಟಕ ರಾಜ್ಯ.